# ಆಹಾ ಸುದ್ದಿ!

★ ಸಸಿತೋಟ



ಸುಲಭವಾಗಿ ಕಾಲುಗಳಿಂದ ಓಡುವ ಬದಲು ಕೈಗಳಿಂದ ಓಡುವ ಸ್ಪರ್ಧೆ ಇತ್ತೀಚೆಗೆ ಉಕ್ರೇನ್‌ನಲ್ಲಿ ನಡೆಯಿತು. ಯೂರಿ ಗೋರಾ 60 ಮೀಟರ್ ದೂರವನ್ನು ಓಡಿ ವಿಜೇತನಾದ. ಗೆದ್ದ ಖುಷಿಯಲ್ಲಿ ಕುಣಿದು ಕುಪ್ಪಳಿಸಿದ್ದು ಮಾತ್ರ ಬಹುಷಃ ಕಾಲುಗಳಿಂದಲೇ ಇರಬಹುದು!

ಬ್ರಿಟನ್ನಿನ ರಾಜಕುವರ ವಿಲಿಯಂ ಹೆಂಡತಿ ಕೇಟ್ (ಮಿಡ್ಲ್‌ಟನ್)ಗೆ ಜುಲೈನಲ್ಲಿ ಹೆರಿಗೆಯಾಗಲಿದೆ ಮತ್ತು ಆ ದೇಶದ ಆರ್ಥಿಕತೆ 400 ದಶಲಕ್ಷ ಡಾಲರ್‌ನಷ್ಟು ಹೆಚ್ಚಾಗಲಿದೆ. ಈ ಎರಡೂ ಸುದ್ದಿಗಳಿಗೂ ಎತ್ತಣ ಸಂಬಂಧ? ಇದೆ. ಆಕೆಯ ಮಾವ ರಾಜಕುಮಾರ ಚಾರ್ಲ್ಸ್, ಆಕೆಯ ತಂದೆ- ತಾಯಿ ಸೇರಿದಂತೆ ಬ್ರಿಟನ್ನಿನ ಹಲವರು ಬೇಬಿ ಶೂ, ಬೇಬಿ ಡ್ರೆಸ್, ಬೇಬಿ ಫುಡ್, ಉಡುಗೊರೆ ವಸ್ತುಗಳ ಹೆಸರಲ್ಲಿ ಭರ್ಜರಿ ವ್ಯಾಪಾರ ಮಾಡುತ್ತಿದ್ದಾರಂತೆ. ಎಲ್ಲವೂ 'ಕೇಟ್ ಪರಿಣಾಮ'.

ಕಾಲ್ಬೆರಳುಗಳಿಂದ ಕುಸ್ತಿ ಆಡುವ ಸ್ಪರ್ಧೆ ಇಂಗ್ಲೆಂಡ್‌ನಲ್ಲಿ ಜನಪ್ರಿಯ. ಆ್ಯಷ್‌ಬೋರ್ನ್‌ನಲ್ಲಿ ಕಾಲ್ಬೆರಳುಗಳಿಂದ ಕುಸ್ತಿ ಆಡುವ ಅಂತರರಾಷ್ಟ್ರೀಯ ಚಾಂಪಿಯನ್‌ಶಿಪ್ 1970ರಿಂದಲೇ ನಡೆಯುತ್ತಿದೆಯಂತೆ. ಅಂತೂ ತಲೆಯಿಂದ ಶುರು ಮಾಡಿ ಕಾಲ್ಬೆರಳ ತುದಿಯವರೆಗೂ ಹೊಡೆದಾಡುವ ಸ್ಪರ್ಧೆಗಳು ಇವೆ ಅಂತಾಯ್ತು.






ಈ 'ಇಲಿ ಮಾನವ' ಅಹ್ಮದಾಬಾದ್‌ನ ಸೋನು ಶರ್ಮಾ. 50ಕ್ಕೂ ಅಧಿಕ ಬಿಳಿ ಇಲಿಗಳನ್ನು ಅಂಗಡಿಯಲ್ಲಿ ಸಾಕಿಕೊಂಡಿದ್ದಾನಂತೆ. ಮಾತ್ರವಲ್ಲ, ಮೈಮೇಲೆ ಆಡಿಸಿಕೊಂಡಿರುತ್ತಾನೆ. ಅಂಗಡಿಯಲ್ಲಿ ಸಾಕುವುದು ಹೋಗಲಿ, ತಾವಾಗೇ ಬೀಡುಬಿಟ್ಟಿರುವ ಇಲಿಗಳನ್ನು ಆಚೆ ಹಾಕದೆ ಹಾಗೇ ಇಟ್ಟುಕೊಂಡರೂ ಸುದ್ದಿಯಾಗಿ, ಫೋಟೊ ಆಗಿ ಕಾಣಿಸಿಕೊಳ್ಳಬಹುದು ನೋಡಿ.

ಅಮೆರಿಕಾದ ಬಾಸ್ಟನ್‌ನಲ್ಲಿ ಎಲ್ಲಾ ಹೈಸ್ಕೂಲ್‌ಗಳಲ್ಲಿ ಉಚಿತ ಪುಸ್ತಕಗಳನ್ನು ಕೊಡುತ್ತಾರೋ ಇಲ್ಲವೋ, ಆದರೆ ಉಚಿತ ಕಾಂಡೋಮ್‌ಗಳಂತೂ ದೊರೆಯುತ್ತಿವೆ. ಇದಕ್ಕೆಂದೇ ಶಾಲೆಗಳ ಸಮಿತಿ ನಿಯಮಗಳಿಗೆ ಸಮ್ಮತಿ ನೀಡಿದೆಯಂತೆ. ಶಾಲಾ ಮಕ್ಕಳ 'ದೈಹಿಕ ಚಟುವಟಿಕೆ' ಹೆಚ್ಚಿಸುವ ಗುರಿ ಹೊಂದಿರುವ ಸಮಿತಿ ಇಂತಹ ಕ್ರಮ ಕೈಗೊಂಡಿದ್ದು ಸಹಜವೇ ಬಿಡಿ.



ಮೇಯರ್ ಚುನಾವಣೆಗೆ ಇಲಿಗಳು (ಮೆಕ್ಸಿಕೋದಲ್ಲಿ ಭ್ರಷ್ಟ ರಾಜಕಾರಣಿಗಳನ್ನು ಟೀಕಿಸುವ ವೈಖರಿ) ಮಾತ್ರ ನಿಂತರೆ ಹೇಗೆ? ಇಲಿಗಳಿಗೆ ದುಃಸ್ವಪ್ನವಾದ ಬೆಕ್ಕನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಎಷ್ಟು ಬೆಂಬಲ ಸಿಗಬಹುದು? ಮೆಕ್ಸಿಕೋದ ಝಾಲಾಪಾದಲ್ಲಿ ರಾಜಕಾರಣಿಗಳಿಂದ ಬೇಸತ್ತ ನಾಗರಿಕರ ಸಂಘಟನೆಯೊಂದು ಇಲಿಗಳಿಗೆ ಎದುರಾಗಿ ಬೆಕ್ಕನ್ನು ನಿಲ್ಲಿಸಿದೆ. ಈ ನಾಲ್ಕು ಕಾಲುಗಳ 'ಮೋರಿಸ್'ಗೆ ಎರಡು ಕಾಲುಗಳ ಮಾನವರ ಬೆಂಬಲ ಎಷ್ಟು ಸಿಕ್ಕಿದೆ ಎಂದರೆ ಸಾಮಾಜಿಕ ಜಾಲತಾಣದಲ್ಲಿ ಒಂದು ಲಕ್ಷಕ್ಕಿಂತಲೂ ಅಧಿಕ 'ಲೈಕ್'ಗಳು ಬಂದಿವೆಯಂತೆ. ಅಂದರೆ 'ಇಲಿ'ಗಳಿಗಿಂತ ಹೆಚ್ಚು ಬೆಂಬಲ. ಮತ್ತೇಕೆ ತಡ, ವೋಟ್ ಫಾರ್ ಕ್ಯಾಟ್!